# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1151 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 13-03-2026 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರ ಪ್ರಕರಣಗಳ ಸಂಖ್ಯೆ ಎಷ್ಟು; ದೋಷಾರೋಪಣ ಪ್ರಮಾಣ (Conviction Rate) ಎಷ್ಟು; One Stop Centers ಪ್ರತಿ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆಯೇ; ಈ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇದೆಯೇ; ಇದ್ದಲ್ಲಿ, ಎಷ್ಟು ಕೊರತೆ ಇದೆ; | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 2023 ರಿಂದ 2026 (20 ಫೆಬ್ರವರಿ) ರವರೆಗೆ ಮಹಿಳೆಯರ ಮೇಲಿನ ಹಿಂಸಾಚಾರ ಕುರಿತಂತೆ ದಾಖಲಾದ ಪ್ರಕರಣಗಳು, ದೋಷಾರೋಪಣಾ ಪತ್ರ ಸಲ್ಲಿಸಿರುವ ಮತ್ತು ಶಿಕ್ಷೆಯಾಗಿರುವ ಪ್ರಕರಣಗಳ ವಿವರವನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br>ರಾಜ್ಯದಲ್ಲಿ ಪ್ರಸ್ತುತ ಒಟ್ಟು 40 'ಒನ್ ಸ್ಟಾಪ್ ಸೆಂಟರ್ 'ಗಳು ಕಾರ್ಯನಿರ್ವಸುತ್ತಿವೆ. ಸದರಿ ಕೇಂದ್ರಗಳಲ್ಲಿ ಸರ್ಕಾರದ ಮಂಜೂರಾತಿ ಹುದ್ದೆಗಳಿಗೆ ಅನ್ವಯಿಸಿ 293 ಸಿಬ್ಬಂದಿಗಳು ಕಾರ್ಯನಿರ್ವಸುತ್ತಿದ್ದಾರೆ.<br>ಈ ಕೇಂದ್ರಗಳಲ್ಲಿ ಪ್ರಸ್ತುತ 27 ಹುದ್ದೆಗಳು ಖಾಲಿಯಿದ್ದು ಕಾಲಕಾಲಕ್ಕೆ ತೆರವಾಗುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲಾಗುವುದು. |
| ಆ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮಹಿಳಾ ಆಶ್ರಯ ಗೃಹಗಳ ಮೇಲ್ವಿಚಾರಣೆ ಎಷ್ಟು ಬಾರಿ ನಡೆಸಲಾಗಿದೆ; ಹಾಗೂ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ Working Womens Hostel ಗಳಿವೆ ಎಲ್ಲಾ ಹಾಸ್ಟೆಲ್ ಗಳು ಕಾರ್ಯನಿರ್ವಹಣೆಯಲ್ಲಿವೆಯೇ; | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮಹಿಳೆಯರಿಗಾಗಿ ಕಾರ್ಯನಿರ್ವಹಿಸುತ್ತಿರುವ ಆಶ್ರಯ ಗೃಹಗಳಾದ ರಾಜ್ಯ ಮಹಿಳಾ ನಿಲಯಗಳು ಮತ್ತು ಸ್ವೀಕಾರ ಕೇಂದ್ರಗಳು, ಶಕ್ತಿ ಸದನ, ರಾಜ್ಯ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು ಮತ್ತು ಸಖಿ ನಿವಾಸ ಕೇಂದ್ರಗಳಿಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಸರಾಸರಿ ಮೂರು ತಿಂಗಳಿಗೊಮ್ಮೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸಿರುತ್ತಾರೆ.<br>ರಾಜ್ಯದ 6 ಜಿಲ್ಲೆಗಳಲ್ಲಿ ಒಟ್ಟು 23 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ (Working Womens Hostel) ಗಳನ್ನು ಹಾಗೂ 20 ಜಿಲ್ಲೆಗಳಲ್ಲಿ ಒಟ್ಟು 58 ಕೇಂದ್ರ ಪುರಸ್ಕೃತ ಸಖಿ ನಿವಾಸ್ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು ಕಾರ್ಯನಿರ್ವಹಣೆಯಲ್ಲಿವೆ. |
| ಇ) | POCSO ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳ್ಳಲು ಸರಾಸರಿ ಎಷ್ಟು ಸಮಯ ತೆಗೆದುಕೊಳ್ಳುತ್ತಿದೆ; Child Care Institutions (CCI) ಮತ್ತು Juvenile Justice Boards (JJB) ಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಎಷ್ಟು? | ಪೋಕ್ಸೋ ಕಾಯ್ದೆ ಪ್ರಕರಣಗಳಲ್ಲಿ ತನಿಖೆಯನ್ನು ನಿಯಮಾನುಸಾರ 60 ದಿನಗಳಲ್ಲಿ ಪೂರ್ಣಗೊಳಿಸುವಂತೆ ಈಗಾಗಲೇ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿರುತ್ತದೆ. ಅದರಂತೆ POCSO ಕಾಯ್ದೆ ಪ್ರಕರಣಗಳಲ್ಲಿ ತನಿಖೆಯನ್ನು 60 ದಿನಗಳಲ್ಲಿ ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗುತ್ತಿದೆ.<br>110 ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ (Child Care Institutions (CCI) ಗಳಲ್ಲಿ ಖಾಲಿ ಇರುವ ಹುದ್ದೆಗಳು: 170<br>Juvenile Justice Boards (JJB) ಗಳಲ್ಲಿ ಖಾಲಿ ಇರುವ ಹುದ್ದೆಗಳು :02 |

ಸಂಖ್ಯೆ: ಡಬ್ಲ್ಯೂಸಿಡಿ 33 ಡಬ್ಲ್ಯೂಡಿಸಿ 2026

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು

# ಅನುಬಂಧ

| ಕ್ರ.ಸಂ | ಶೀರ್ಷಿಕೆ | 2023 | | | | |
|---|---|---|---|---|---|---|
| | | ದಾಖಲಾದ ಪ್ರಕರಣ | ದೋಷಾರೋಪಣ ಸಲ್ಲಿಕೆ | ದೋಷಾರೋಪಣ ಸಲ್ಲಿಕೆಯ ಪ್ರಮಾಣ | ಶಿಕ್ಷೆ | ಶಿಕ್ಷೆಯ ಪ್ರಮಾಣ |
| 1 | ಅತ್ಯಾಚಾರ | 600 | 540 | 90% | 0 | 0 |
| 2 | ಲೈಂಗಿಕ ಕಿರುಕುಳ | 6489 | 5707 | 87.93% | 44 | 3.93% |
| 3 | ವರದಕ್ಷಿಣ ಸಾವು | 158 | 149 | 94.93% | 1 | 4.34% |
| 4 | ಗಂಡನಿಂದ ಕಿರುಕುಳ | 2949 | 2575 | 87.31% | 14 | 2.36 |
| 5 | ಡಿ.ಪಿ.ಕಾಯ್ದೆ | 2350 | 2005 | 85.31% | 3 | 0.77 |

| ಕ್ರ.ಸಂ | ಶೀರ್ಷಿಕೆ | 2024 | | | | |
|---|---|---|---|---|---|---|
| | | ದಾಖಲಾದ ಪ್ರಕರಣ | ದೋಷಾರೋಪಣ ಸಲ್ಲಿಕೆ | ದೋಷಾರೋಪಣ ಸಲ್ಲಿಕೆಯ ಪ್ರಮಾಣ | ಶಿಕ್ಷೆ | ಶಿಕ್ಷೆಯ ಪ್ರಮಾಣ |
| 1 | ಅತ್ಯಾಚಾರ | 720 | 634 | 88% | 3 | 5.80% |
| 2 | ಲೈಂಗಿಕ ಕಿರುಕುಳ | 6334 | 5402 | 85.28% | 27 | 5.90% |
| 3 | ವರದಕ್ಷಿಣ ಸಾವು | 112 | 111 | 99.10% | 0 | 0 |
| 4 | ಗಂಡನಿಂದ ಕಿರುಕುಳ | 2894 | 1664 | 57.49% | 8 | 2.61% |
| 5 | ಡಿ.ಪಿ.ಕಾಯ್ದೆ | 2001 | 1671 | 83.50% | 4 | 2.87% |

| ಕ್ರ.ಸಂ | ಶೀರ್ಷಿಕೆ | 2025 | | | | |
|---|---|---|---|---|---|---|
| | | ದಾಖಲಾದ ಪ್ರಕರಣ | ದೋಷಾರೋಪಣ ಸಲ್ಲಿಕೆ | ದೋಷಾರೋಪಣ ಸಲ್ಲಿಕೆಯ ಪ್ರಮಾಣ | ಶಿಕ್ಷೆ | ಶಿಕ್ಷೆಯ ಪ್ರಮಾಣ |
| 1 | ಅತ್ಯಾಚಾರ | 678 | 520 | 76.69% | 0 | 0 |
| 2 | ಲೈಂಗಿಕ ಕಿರುಕುಳ | 5853 | 3752 | 64.10% | 3 | 9.37% |
| 3 | ವರದಕ್ಷಿಣ ಸಾವು | 114 | 94 | 63.88% | 0 | 0 |
| 4 | ಗಂಡನಿಂದ ಕಿರುಕುಳ | 2771 | 1958 | 70.66% | 1 | 2.50% |
| 5 | ಡಿ.ಪಿ.ಕಾಯ್ದೆ | 2097 | 1391 | 66.33% | 0 | 0 |

| ಕ್ರ.ಸಂ | ಶೀರ್ಷಿಕೆ | 2026 (20 ಫೆಬ್ರವರಿ) | | | | |
|---|---|---|---|---|---|---|
| | | ದಾಖಲಾದ ಪ್ರಕರಣ | ದೋಷಾರೋಪಣ ಸಲ್ಲಿಕೆ | ದೋಷಾರೋಪಣ ಸಲ್ಲಿಕೆಯ ಪ್ರಮಾಣ | ಶಿಕ್ಷೆ | ಶಿಕ್ಷೆಯ ಪ್ರಮಾಣ |
| 1 | ಅತ್ಯಾಚಾರ | 74 | 1 | 1.35% | 0 | 0 |
| 2 | ಲೈಂಗಿಕ ಕಿರುಕುಳ | 863 | 14 | 1.73% | 0 | 0 |
| 3 | ವರದಕ್ಷಿಣ ಸಾವು | 16 | 0 | 0 | 0 | 0 |
| 4 | ಗಂಡನಿಂದ ಕಿರುಕುಳ | 398 | 12 | 3.01% | 0 | 0 |
| 5 | ಡಿ.ಪಿ.ಕಾಯ್ದೆ | 241 | 8 | 3.31% | 0 | 0 |